Code No.: **214 NS**

# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ

ಮಲ್ಲೇಶ್ವರಂ, ಬೆಂಗಳೂರು–560003.

# KARNATAKA SCHOOL EXAMINATION AND ASSESSMENT BOARD

Malleshwaram, Bengaluru–560003.

## ಕರ್ನಾಟಕ ಮುಕ್ತ ಶಾಲೆ ಪರೀಕ್ಷೆ, ಮೇ- 2024
## Karnataka Open School Examination, May - 2024

**MODEL QUESTION PAPER / ಮಾದರಿ ಪ್ರಶ್ನೆ ಪತ್ರಿಕೆ**

| | | |
|---|---|---|
| Subject / ವಿಷಯ | : | **ECONOMICS**<br>**ಅರ್ಥಶಾಸ್ತ್ರ** |
| Maximum Marks / ಗರಿಷ್ಠ ಅಂಕಗಳು | : | 100 |
| Duration of Exam / ಪರೀಕ್ಷೆ ಅವಧಿ | : | 3 hours / 3 ಗಂಟೆಗಳು |
| Time allotted to read the instructions / ಸೂಚನೆಗಳನ್ನು ಓದಲು ನಿಗಧಿಗೊಳಿಸಿರುವ ಅವಧಿ | : | 15 minutes / 15 ನಿಮಿಷಗಳು |

**ಅಭ್ಯರ್ಥಿಗಳಿಗೆ ಸಾಮಾನ್ಯ ಸೂಚನೆಗಳು / *General Instructions to the Candidates:***

1. ಅಭ್ಯರ್ಥಿಯು ತನ್ನ ನೋಂದಣಿ ಸಂಖ್ಯೆಯನ್ನು ಪ್ರವೇಶ ಪತ್ರದಲ್ಲಿ ಮುದ್ರಿಸಿರುವಂತೆಯೇ ಉತ್ತರ–ಪುಸ್ತಿಕೆಯಲ್ಲಿ ನೀಡಿರುವ ನಿಗದಿತ ಸ್ಥಳದಲ್ಲಿ ಸ್ಪಷ್ಟವಾಗಿ ಬರೆಯ ತಕ್ಕದ್ದು.

   Candidate should write their Register Number on the Answer Booklet as printed in their hall ticket.

2. ಅಭ್ಯರ್ಥಿಯು ಹೆಚ್ಚುವರಿ ಉತ್ತರ ಹಾಳೆಗಳನ್ನು ಪಡೆದಲ್ಲಿ, ಉತ್ತರ ಹಾಳೆಗಳ ಮುಖಪುಟದ ಮೇಲಿನ ನಿಗದಿತ ಸ್ಥಳದಲ್ಲಿ ಮುಖ್ಯ ಉತ್ತರ–ಪುಸ್ತಿಕೆಯ ಕ್ರಮ ಸಂಖ್ಯೆಯನ್ನು ಬರೆಯತಕ್ಕದ್ದು.

   Candidate should write their Main Answer Booklet Number on the additional answer sheets in the space provided.

3. ಅಭ್ಯರ್ಥಿಗಳು ನಿಗದಿಪಡಿಸಿದ ಸ್ಥಳವನ್ನು ಹೊರತುಪಡಿಸಿ ಇನ್ನಿತರೇ ಯಾವುದೇ ಪುಟಗಳಲ್ಲಿ ನೋಂದಣಿ ಸಂಖ್ಯೆ, ಗುರುತು ಹಾಗೂ ಚಿಹ್ನೆ ಇನ್ನಿತರೆ ಯಾವುದೇ ಮಾಹಿತಿಗಳನ್ನು ಬರೆಯಬಾರದು. ಒಂದು ವೇಳೆ, ಈ ಬಗೆಯ ಯಾವುದೇ ಮಾಹಿತಿಗಳನ್ನು ಉತ್ತರ–ಪುಸ್ತಿಕೆಯಲ್ಲಿ ಬರೆದ ಪಕ್ಷದಲ್ಲಿ ಅಂತಹ ಉತ್ತರ–ಪುಸ್ತಿಕೆಯನ್ನು ಮೌಲ್ಯ ಮಾಪನಕ್ಕೆ ಪರಿಗಣಿಸಲಾಗುವುದಿಲ್ಲ.

   Candidates should not write Register Number, mark, sign or any other information in the Answer Booklet except in the specified place. In case, it is found any information in the sheets of the answer scripts such answer scripts will not be considered for evaluation.

4. ಪರೀಕ್ಷಾ ಸಮಯದಲ್ಲಿ ಅಭ್ಯರ್ಥಿಯು ಪರೀಕ್ಷಾ ಅವ್ಯವಹಾರದಲ್ಲಿ ತೊಡಗಿಸಿಕೊಂಡಿರುವುದು ಕಂಡುಬಂದಲ್ಲಿ ಹಾಗೂ ಪರೀಕ್ಷಾ ಸೂಚನೆಗಳನ್ನು ಉಲ್ಲಂಘಿಸಿದ್ದಲ್ಲಿ ಅಂತಹ ಅಭ್ಯರ್ಥಿಯ ವಿರುದ್ಧ ಪರೀಕ್ಷಾ ನಿಯಮಾನುಸಾರ ಶಿಸ್ತು ಕ್ರಮಕ್ಕೆ ಗುರಿಪಡಿಸಲಾಗುವುದು ಮತ್ತು ಅಂತಹ ಅಭ್ಯರ್ಥಿಯ ಉತ್ತರ–ಪುಸ್ತಿಕೆಯನ್ನು ಮೌಲ್ಯಮಾಪನಕ್ಕೆ ಪರಿಗಣಿಸಲಾಗುವುದಿಲ್ಲ.

   Candidate found to be indulged in malpractice during examination and violating examination instructions, action will be taken against such candidate as per the examination rules and his/her answer booklet will not be considered for evaluation.

5. ಉತ್ತರ ಬರೆಯಲು ಕಪ್ಪು / ನೀಲಿ ಶಾಯಿಯ ಬಾಲ್ ಪಾಯಿಂಟ್ ಪೆನ್ ಮಾತ್ರ ಉಪಯೋಗಿಸತಕ್ಕದ್ದು.

   Use black / blue ball point pen only to write the answers.

[ Turn over

***ಸೂಚನೆಗಳು :***

i) ಎಲ್ಲಾ ಪ್ರಶ್ನೆಗಳೂ ಕಡ್ಡಾಯ.

ii) ಪ್ರಶ್ನೆ ಸಂಖ್ಯೆಗಳನ್ನು ಉತ್ತರ ಪತ್ರಿಕೆಯಲ್ಲಿ ತಪ್ಪದೇ ನಮೂದಿಸಿ.

iii) ಉತ್ತರಗಳು ನೇರವಾಗಿರಲಿ ಹಾಗೂ ಸಂಕ್ಷಿಪ್ತವಾಗಿರಲಿ.

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ : 5 × 1 = 5**

1) ಪಾಲುಗಾರಿಕಾ ಸಂಸ್ಥೆಗಳಲ್ಲಿ ಗರಿಷ್ಠ ಪಾಲುಗಾರರ ಸಂಖ್ಯೆ.

(A) ಎರಡು (B) ಏಳು

(C) ಹತ್ತು (D) ಇಪ್ಪತ್ತು

2) ಮುಗಿಯದೇ ಇರುವ ಸಂಪನ್ಮೂಲಕ್ಕೆ ಒಂದು ಉತ್ತಮ ಉದಾಹರಣೆ.

(A) ಪೆಟ್ರೋಲ್ (B) ಕಲ್ಲಿದ್ದಲು

(C) ಸೌರಶಕ್ತಿ (D) ಕಬ್ಬಿಣದ ಅದಿರು

3) ಓಝೋನ್ ಪದರದ ಮೇಲೆ ಪ್ರತಿಕೂಲ ಪರಿಣಾಮ ಉಂಟುಮಾಡುವ ಅನಿಲ.

(A) ಕಾರ್ಬನ್ ಮಾನಾಕ್ಸೈಡ್ (B) ಕ್ಲೋರೋ–ಫ್ಲೋರೋ ಕಾರ್ಬನ್

(C) ಗಂಧಕದ ಡೈ ಆಕ್ಸೈಡ್ (D) ಹೈಡ್ರೋಜನ್ ಕ್ಲೋರೈಡ್

4) ಈ ಕೆಳಗಿನವುಗಳಲ್ಲಿ ಯಾವುದು ಆರ್ಥಿಕೇತರ ಚಟುವಟಿಕೆಯಾಗಿದೆ.

(A) ಶಿಕ್ಷಕ (B) ವೈದ್ಯ

(C) ಗೃಹಿಣಿ (D) ನೇಕಾರ

5) ಉತ್ಪಾದನೆಯು ಇವುಗಳ ಸಂಯುಕ್ತ ಪ್ರಯತ್ನದ ಫಲವಾಗಿದೆ.

(A) ಭೂಮಿ ಮತ್ತು ಬಂಡವಾಳ

(B) ಭೂಮಿ, ಶ್ರಮ, ಬಂಡವಾಳ ಮತ್ತು ಉದ್ಯಮ ಸಾಹಸತ್ವ

(C) ಉದ್ಯಮ ಸಾಹಸತ್ವ, ಭೂಮಿ ಮತ್ತು ಶ್ರಮ

(D) ಶ್ರಮ ಮತ್ತು ಬಂಡವಾಳ

**II. ಈ ಕೆಳಕಂಡ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗವನ್ನು ಸೂಕ್ತ ಉತ್ತರದಿಂದ ತುಂಬಿರಿ :**

**5 × 1 = 5**

6) ಸಕ್ಕರೆ ಕೈಗಾರಿಕೆಯಲ್ಲಿ ಕೆಲಸ ಮಾಡುತ್ತಿರುವ ಜನರು __________ ವಲಯಕ್ಕೆ ಸೇರುತ್ತಾರೆ.

7) ಅರಬ್ ದೇಶಗಳು ____________ ಸಂಪನ್ಮೂಲದಿಂದಾಗಿ ಶ್ರೀಮಂತ ದೇಶಗಳಾಗಿವೆ.

8) ಆರ್ಥಿಕಾಭಿವೃದ್ಧಿಯ ಪ್ರಾರಂಭಿಕ ಹಂತದಲ್ಲಿ ಜನಸಂಖ್ಯೆಯ ಬೆಳವಣಿಗೆ ದರ _________ ಆಗಿರುತ್ತದೆ.

9) ಸರಕು ಮತ್ತು ಸೇವೆಗಳು ಅವುಗಳನ್ನು ಉಪಯೋಗಿಸುವವರನ್ನು ತಲುಪಿಸುವ ಪ್ರಕ್ರಿಯೆ ____________ .

10) ವಸ್ತುವಿನ ಬೆಲೆ ಏರಿಕೆಯು ಆ ವಸ್ತುವಿನ ಬೇಡಿಕೆಯ _____________ ಕಾರಣವಾಗುತ್ತದೆ.

**III. ಕೆಳಗಿನ ವಾಕ್ಯಗಳು ಸರಿಯೋ ಅಥವಾ ತಪ್ಪೋ ತಿಳಿಸಿ : 5 × 1 = 5**

11) ಭಾರತೀಯ ರೈಲ್ವೆಯು ಒಂದು ಖಾಸಗಿ ಘಟಕವಾಗಿದೆ.

12) ಹೆಚ್ಚಿನ ಬಡಜನರು ಗ್ರಾಮೀಣ ಪ್ರದೇಶದಲ್ಲಿದ್ದಾರೆ.

13) ಕೈಗಾರಿಕಾ ಕ್ರಾಂತಿ ಮೊಟ್ಟ ಮೊದಲಿಗೆ ಸಂಭವಿಸಿದ ರಾಷ್ಟ್ರ ಬ್ರಿಟನ್.

14) ಜನಸಂಖ್ಯೆ ಏರಿಕೆಯೊಂದಿಗೆ ಎಲ್ಲಾ ರೀತಿಯ ಸರಕು ಮತ್ತು ಸೇವೆಗಳ ಬೇಡಿಕೆ ಕಡಿಮೆಯಾಗುತ್ತದೆ.

15) ಅರಣ್ಯಗಳು ಮುಗಿದು ಹೋಗುವ ನೈಸರ್ಗಿಕ ಸಂಪನ್ಮೂಲಗಳಾಗಿವೆ.

**IV. ಕೆಳಗಿನ 'A' ಪಟ್ಟಿಯನ್ನು 'B' ಪಟ್ಟಿಯೊಂದಿಗೆ ಹೊಂದಿಸಿ ಬರೆಯಿರಿ :**

**5 × 1 = 5**

| *'A' ಪಟ್ಟಿ* | *'B' ಪಟ್ಟಿ* |
|---|---|
| 16. ವಿಮಾ ಸೇವೆಗಳು | a) ಸರಕು ಮತ್ತು ಸೇವೆಗಳ ವಿತರಣೆ |
| 17. ಸಂಪರ್ಕಗಳು | b) ಸಾಲ ಸೌಲಭ್ಯ |
| 18. ಸಾರ್ವಜನಿಕ ಆಡಳಿತ | c) ಗಂಡಾಂತರಗಳಿಂದ ರಕ್ಷಣೆ |
| 19. ಬ್ಯಾಂಕುಗಳು | d) ಶಾಂತಿ ಮತ್ತು ಭದ್ರತೆ |
| 20. ಸಾರಿಗೆ ಸೇವೆಗಳು | e) ಮಾಹಿತಿ ವಿನಿಮಯ |

**V. ಕೆಳಗಿನ ಪ್ರತಿಯೊಂದು ಪ್ರಶ್ನೆಗೂ *ಒಂದು* ಅಥವಾ *ಎರಡು* ವಾಕ್ಯಗಳಲ್ಲಿ ಉತ್ತರ ಬರೆಯಿರಿ :**

**10 × 1 = 10**

21. ಹೂಡಿಕೆ ಎಂದರೇನು ?

22. ಭಾರತದಲ್ಲಿ ಪಾಲುಗಾರಿಕೆ ಕಾಯ್ದೆ ಜಾರಿಗೆ ಬಂದ ವರ್ಷ ಯಾವುದು ?

23. ಅಂತರರಾಷ್ಟ್ರೀಯ ಮಾರುಕಟ್ಟೆ ಎಂದರೇನು ?

24. ತಲಾ ಆದಾಯವನ್ನು ಹೇಗೆ ಲೆಕ್ಕ ಹಾಕಲಾಗುತ್ತಿದೆ ?

25. ಮಾಲಿನ್ಯ ಎಂದರೇನು ?

26. ಆರ್ಥಿಕ ಬೆಳವಣಿಗೆ ಎಂದರೇನು ?

27. 'ರಫ್ತು' ಪದವನ್ನು ವ್ಯಾಖ್ಯಾನಿಸಿ.

28. IMF ನ್ನು ವಿಸ್ತರಿಸಿ ಬರೆಯಿರಿ.

29. ಆರ್ಥಿಕ ಬಯಕೆಗಳು ಎಂದರೇನು ?

30. ಮಾರಾಟಗಾರ ಪದದ ಅರ್ಥವನ್ನು ವಿವರಿಸಿ.

**VI. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರ ಬರೆಯಿರಿ :**

**8 × 2 = 16**

31. ಉತ್ಪಾದನಾ ಘಟಕದ ನಾಲ್ಕು ಉತ್ಪಾದನಾಂಗಗಳನ್ನು ತಿಳಿಸಿ.

32. ವಿವಿಧ ಮಾರಾಟ ವಿಧಾನಗಳನ್ನು ವಿವರಿಸಿ.

33. ಉತ್ಪಾದನಾ ಘಟಕಗಳ ಎರಡು ವಿಧಗಳಾವುವು ?

34. ಪ್ರಾಥಮಿಕ ವಲಯದಲ್ಲಿ ಕಂಡುಬರುವ ಉದ್ಯೋಗಗಳನ್ನು ಪಟ್ಟಿ ಮಾಡಿ.

35. ಮಾನವನ ಪ್ರಮುಖ ಮೂಲಭೂತ ಅಗತ್ಯತೆಗಳನ್ನು ತಿಳಿಸಿ.

36. ಆರ್ಥಿಕ ಮತ್ತು ಆರ್ಥಿಕೇತರ ಬಯಕೆಗಳನ್ನು ವ್ಯಾಖ್ಯಾನಿಸಿ.

37. ಭಾರತದಲ್ಲಿ 'ಉತ್ಪಾದನೆಯನ್ನು ನಿರಂತರವಾಗಿ ಹೆಚ್ಚಿಸುವ ಅಗತ್ಯತೆ ಇದೆ' ಏಕೆ ?

38. ಜನರ ಮನೋಭಾವವನ್ನು ನಿರ್ಧರಿಸುವ ಪ್ರಮುಖ ಅಂಶಗಳಾವುವು ?

**VII. ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಐದು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 8 × 3 = 24**

39. ಉದ್ಯಮ ಸಾಹಸಿಯ ಮುಖ್ಯ ಕಾರ್ಯಗಳನ್ನು ತಿಳಿಸಿ.

40. ಸರಕುಗಳು ಸೇವೆಗಳಿಗಿಂತ ಭಿನ್ನವಾಗಿವೆ. ಹೇಗೆ ?

41. 'ಕೆಲಸದಿಂದ ಪಡೆಯುವ ಆದಾಯ ವ್ಯತ್ಯಾಸವಾಗಲು ಅನೇಕ ಕಾರಣಗಳಿವೆ' ಸಮರ್ಥಿಸಿ.

42. ಖಾಸಗಿ ಮತ್ತು ಸರ್ಕಾರಿ ಉತ್ಪಾದನಾ ಘಟಕಗಳ ವ್ಯತ್ಯಾಸಗಳನ್ನು ಪಟ್ಟಿ ಮಾಡಿ.

43. ದೊಡ್ಡ ಪ್ರಮಾಣದ ಘಟಕಗಳ ಪ್ರಾಮುಖ್ಯತೆಗಳನ್ನು ವಿವರಿಸಿ.

44. ಮಿಶ್ರ ಆರ್ಥಿಕತೆಯ ಅನುಕೂಲ ಮತ್ತು ಅನಾನುಕೂಲಗಳನ್ನು ತಿಳಿಸಿ.

45. 'ಮಾರಾಟಗಾರ ತನ್ನ ವಸ್ತುಗಳಿಗೆ ಖರೀದಿಗಾರರನ್ನು ಆಕರ್ಷಿಸಲು ಅನೇಕ ಮಾರ್ಗಗಳನ್ನು ಅನುಸರಿಸುತ್ತಾರೆ' ಸಮರ್ಥಿಸಿ.

46. ಸೇವೆಗಳ ಗುಣಮಟ್ಟದ ಮೇಲೆ ಪ್ರಭಾವ ಬೀರುವ ಅಂಶಗಳನ್ನು ವಿವರಿಸಿ.

**VIII. ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ :**

**5 × 4 = 20**

47. ಉದ್ಯೋಗಾವಕಾಶಗಳನ್ನು ಹೆಚ್ಚಿಸುವ ಕ್ರಮಗಳನ್ನು ವಿವರಿಸಿ.

48. ಬೆಲೆಗಳ ವಿವಿಧ ಪ್ರಕಾರಗಳನ್ನು ತಿಳಿಸಿ.

49. ಉತ್ಪಾದನಾ ಘಟಕದ ಪ್ರಮಾಣದ ಮುಖ್ಯ ಸೂಚಿಗಳನ್ನು ವಿವರಿಸಿ.

50. ಬಡದೇಶಗಳ (ಹಿಂದುಳಿದ ರಾಷ್ಟ್ರಗಳ) ಲಕ್ಷಣಗಳನ್ನು ಪಟ್ಟಿ ಮಾಡಿ.

51. ಈ ಕೆಳಗಿನ ಕೋಷ್ಟಕದಲ್ಲಿ ಭಾರತದ ಜನಗಣತಿಯ ವರ್ಷ ಮತ್ತು ಜನಸಂಖ್ಯಾ ಹೆಚ್ಚಳದ ಪ್ರಮಾಣವನ್ನು ನೀಡಲಾಗಿದೆ. ಇದಕ್ಕೆ ಒಂದು ಸ್ತಂಭನಕ್ಷೆ ರಚಿಸಿ.

| **ಜನಗಣತಿ ವರ್ಷ** | **ಜನಸಂಖ್ಯಾ ಹೆಚ್ಚಳ (ಕೋಟಿಗಳಲ್ಲಿ)** |
|---|---|
| 1951 | 36.1 |
| 1961 | 43.9 |
| 1971 | 54.8 |
| 1981 | 68.3 |
| 1991 | 84.3 |
| 2001 | 102.0 |

**IX. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಹತ್ತು ಅಥವಾ ಹನ್ನೆರಡು ವಾಕ್ಯಗಳಲ್ಲಿ ಉತ್ತರ ಬರೆಯಿರಿ :**

**2 × 5 = 10**

52. ಶ್ರಮ ಎಂದರೇನು ? ಶ್ರಮದ ಲಕ್ಷಣಗಳನ್ನು ವಿವರಿಸಿ.

53. 'ಮುಕ್ತ ಮಾರುಕಟ್ಟೆ ಆರ್ಥಿಕತೆ ಅಥವಾ ಬಂಡವಾಳಶಾಯಿ ಆರ್ಥಿಕತೆ ತನ್ನದೆಯಾದ ಲಕ್ಷಣಗಳನ್ನು ಹೊಂದಿದೆ'. ದೃಢೀಕರಿಸಿ.

=============

DO NOT WRITE ANYTHING HERE